aa-379
T.P-2

Reg B G No.155 26-9-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ರಾಜಧಾನಿ ಗಾಂಧಿ ಶತಮಾನೋತ್ಸವಕ್ಕೆ ಸಮಿತಿ ರಚನೆ

"ಸತ್ಯವಾದಿ"ಯ ಸ್ವರ್ಣೋತ್ಸವ

"ಸತ್ಯವಾದಿ"ಯ ಸ್ವರ್ಣೋತ್ಸವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆಣೈ ರವರು, ಶ್ರೀ ಎಂ. ಬಿ. ಬಸವಯ್ಯನವರು. ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ. ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗಸೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'

ಚಾಮರಾಜಪುರಂ, ಮೈಸೂರು 4.

ನೀವು ನಾಲ್ಕು ಅಂಗಡಿ ಸುತ್ತುವುದೂ ಒಂದೇ ನೆಟ್ಟಗೆ ಬ್ಯಾಂಕ್ ರೋಡ್ ಬಾಹುಬಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ. ಅವರಲ್ಲಿ ನಾಪ್-ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಚೌಕಸಿ ಇಲ್ಲ ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟಿನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಅಷ್ಟೆ.

ಇಂದಿರಾರವರ ಟೀಕೆ

ಬ್ರೆಜಿಲಿನ ಅಧ್ಯಕ್ಷ ಕೋಸ್ಟಾಸಿಲ್ವಾ ರವರು ಬ್ರೆಸಿಲಿಯಾವಲ್ಲಿ ನಿನ್ನೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರ ಗೌರವಾರ್ಥ ಏರ್ಪಡಿಸಿದ್ದ ಔತಣದಲ್ಲಿ. ಇಂದಿರಾರವರು ಭಾಷಣ ಮಾಡುತ್ತಾ, ಹೊರದೇಶದವರು ಕೊಡುತ್ತಿರುವ ಈಗಿನ ನೆರವು ಮಾದಿಯು ವಾಪಸು ಮಾಡತಕ್ಕ ದಾನವೇ ಅಥವಾ ರಾಜಕೀಯ ಬಂಡವಾಳವೇ ಎಂದು ಟೀಕಿಸಿದ್ದಾರೆ.

★

ಹಣದ ಲೂಟಿ

ಕೃಷ್ಣಮಾಕೊಂಡ ರೈಲು ನಿಲ್ದಾಣದ ಮೇಲೆ 30 ಮಂದಿ ಸಶಸ್ತ್ರ ದಾಳಿ ನಡೆಸಿ, ಕಿಟಕಿ ಬಾಗಿಲು ಒಡೆದು ಹಣ ಹೊಡೆದುಕೊಂಡು ಪರಾರಿ ಆದರು.

★

ಅಕ್ಕಿ ಪಡಿತರ ಖೋತಾ

ಬರುವ ಭಾನುವಾರದಿಂದ ಅಕ್ಕಿ ಪಡಿತರ ಪ್ರಮಾಣದಲ್ಲಿ ಕೇಕಡ 50 ಖೋತಾ ಮಾಡುವುದಾಗಿ ಸರ್ಕಾರ ಪ್ರಕಟಿಸಿರುವುದಾಗಿ ತಿರುವೇಂದ್ರಂ ವಾರ್ತೆ. ದೊಡ್ಡವರಿಗೆ ದಿನಕ್ಕೆ 3 ಔನ್ಸುಗಳ ಅಕ್ಕಿ ದೊರೆಯುವಂತಾಯಿತು.

ಇಫ್ಲ್ಲಯೆಂಜ

ಮದರಾಸು ನಗರದಲ್ಲಿ ಇಲ್ಲಿಯ ವರೆಗೆ 5 ಲಕ್ಷ ಮಂದಿ ಇಫ್ಲ್ಲುಯೆಂಜಕ್ಕೆ ತುತ್ತಾಗಿದ್ದಾರೆ.

ಸಾಲ ಪರಿಹಾರ

ಭಾರತಕ್ಕೆ ಮತ್ತಷ್ಟು ಸಾಲ ಪರಿಹಾರ ಅವಶ್ಯಕವೆಂದು ವಿಶ್ವಬ್ಯಾಂಕು ತಿಳಿಸಿರುವದೆಂದು ನವದೆಹಲಿ ವಾರ್ತೆ.

ಸಭೆ ಅಧ್ಯಕ್ಷರ ಕ್ರಮ

ಪೌರಸಭೆ ಅಧ್ಯಕ್ಷರ ಸೂಚನೆಯಂತೆ ನಾಲ್ಕು ಡಿ ಎಂ ಕೆ ಸದಸ್ಯರನ್ನು ಪೋಲೀಸರು ಹೊರಗೆ ಹಾಕಿದರು ಎಂದು ಮಧುಶಿ ವಾರ್ತೆ.

ಮಹಾತ್ಮಾ ಗಾಂಧೀಜೀಯವರ ಶತಮಾನೋತ್ಸವ

ಬೆಂಗಳೂರು— ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಅಧ್ಯಕ್ಷತೆಯಲ್ಲಿ ನಡೆದ ಗಾಂಧಿ ಜನ್ಮ ಶತಮಾನೋತ್ಸವ ಸದಾರಂಭ ಸನ್ನಿತಿಯು ಶತಮಾನೋತ್ಸವವನ್ನು 1968 ನೇ ಆಕ್ಟೋಬರ್ 2 ರಿಂದ 1970 ನೇ ಜನವರಿ 30 ರವರೆಗೆ ರಾಜ್ಯದಲ್ಲಿ ವೈಭವವಾಗಿ ನೆರವೇರಿಸಲು ನಿರ್ಧರಿಸಲಾಯಿತು.

ಕಳ್ಳ ಸಿಕ್ಕಿದ

ಬೆಂಗಳೂರು— ದೇವಾಲಯಗಳಲ್ಲಿ ಕಳವು ಮಾಡುತ್ತಿದ್ದ ಕಬ್ಬಾಪೇಟೆಯ ನಾಗರಾಜ್ ಎಂಬುವನನ್ನು ಪೋಲೀಸರು ಬಂಧಿಸಿದರು – ಅವನಲ್ಲಿ ಒಂದು ಜೊತೆ ಬೆಳ್ಳಿ ಪಾದುಕೆಗಳು, ಬೆಳ್ಳೀ ಕಿರೀಟ, ಬೆಳ್ಳೀ ತಟ್ಟೆ, ಬೆಳ್ಳೀ ಬಟ್ಟಲು ವಶಪಡಿಸಿಕೊಳ್ಳಲಾಯಿತು.

ಮತ್ತೆ ಮುಷ್ಕರ

ನವದೆಹಲಿ— ತಮ್ಮ ಕೇಳಿಕೆ ನೆರವೇರಿಸಲ್ಪಡದಿದ್ದಕ್ಕೆ ಕೇಂದ್ರ ಸರ್ಕಾರಿ ನೌಕರರು ಅನಿರ್ದಿಷ್ಟಕಾಲ ಮುಷ್ಕರ ಹೂಡಬೇಕಾದೀತೆಂದು ಕಾರ್ಯಾಚರಣ ಸಮಿತಿಯ ವಕ್ತಾರರೊಬ್ಬರು ಹೇಳಿರುವರು.

ಬೌದ್ಧ ಸಮ್ಮೇಳನ

ಬೊಂಬಾಯಿ— ನವೆಂಬರು 23-24 ರಂದು ನಡೆಸಲಾಗುವ ಅಖಿಲ ಭಾರತ ಬೌದ್ಧ ಸಮ್ಮೇಳನದಲ್ಲಿ ದಲೈ ಲಾಮಾರವರು ಮುಖ್ಯ ಅತಿಥಿಗಳಾಗಿರುವರು.

ಕ್ರಿಕೆಟ್

ಲಂಡನ್— ಎಂ ಸಿ ಸಿ ಯವರು ಭಾರತ ಮತ್ತು ಪಾಕಿಸ್ಥಾನಗಳಲ್ಲಿ ಪ್ರವಾಸ ಮಾಡಲು ನಿರ್ಧರಿಸಿರುವರು.

ಕುಡುಕ ಮತ ಗುರು

ಡೆನವರ್ (ಕೊಲೆರಾಡೊ)— ಬಹಿರಂಗವಾಗಿ ಕುಡಿದು ಮತ್ತು ಚರ್ಚು ಮಹಿಳೆಯರಿಗೆ ಅನೀತಿ ಸೂಚನೆ ನೀಡಿದ ಆಪಾದನೆಗಾಗಿ ಬಿಷಪ್‌ರ ನ್ಯಾಯಾಸ್ಥಾನವು 64 ವರ್ಷದ ಬಿಷಪ್ ಜೋಸೆಪ್ ವಿನಿಸ್ಸನ್ನು ಮತಗುರು ಅಧಿಕಾರದಿಂದ ಹೊರದೂಡಿದೆ.

ಮೆಗು ಮಾಯ

ಮದರಾಸು— ಸರ್ಕಾರಿ ಹೆರಿಗೆ ಆಸ್ಪತ್ರೆಯಿಂದ ಶುಕ್ರವಾರ 6 ದಿನಗಳ ಶಿಶುವೊಂದು ಮಾಯವಾಗಿದೆ : ಮಗುವಿನ ತಂದೆ ಪೋಲೀಸಿಗೆ ದೂರಿತ್ತಿದ್ದಾರೆ ; ಯಾರೋ ಮಕ್ಕಳಿಲ್ಲದ ಮಹಿಳೆ ಹಾರಿಸಿಕೊಂಡುಹೋಗಿರುವಂತಿದೆ.

ಯುದ್ಧ ಹಡಗು

ನವದೆಹಲಿ— ಮಜಗಾಂ ರೇವಿನಲ್ಲಿ ನಿರ್ಮಿಸಲಾಗುತ್ತಿರುವ 3 ಸಬ್‌ಮೆರೀನ್ ವಿರುದ್ಧದ, ಎಲ್ಲಾ ಕಾಲಕ್ಕೂ ಅನುಕೂಲವಾದ, ನವೀನ ಯುದ್ಧದ ಹಡಗುಗಳಲ್ಲಿ ಒಂದನ್ನು ಪ್ರಧಾನಿ ಇಂದಿರಾರವರು ಆಕ್ಟೋಬರು 23 ರಂದು ಬೊಂಬಾಯಿನಲ್ಲಿ ನೀರಿಗೆ ಬಿಡುವರು.

ಮುಷ್ಕರ

ಮಂಡ್ಯ— ಸಕ್ಕರೆ ಕಂಪೆನಿ ಕೆಲಸಗಾರರು ಅನಿರ್ದಿಷ್ಟ ಕಾಲ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.

ಸಿಗರೇಟು ಬೆಲೆ

ಲಂಡನ್— ಬ್ರಿಟನ್ನಿನಲ್ಲಿ ಸಿಗರೇಟು ತಯಾರಿಸುವ ದೊಡ್ಡ ಮೂರು ಸಂಸ್ಥೆಗಳು ಸಿಗರೇಟು ಬೆಲೆಯನ್ನು ಬಹು ಮಟ್ಟಿಗೆ ತಗ್ಗಿಸಿವೆ.

ಭಕ್ತರಿಂದ ಶುಲ್ಕ

ಮಧುರೈ— ದೇವಾಲಯದ ಗರ್ಭಗುಡಿಗೆ ಪ್ರವೇಶಿಸುವ ಭಕ್ತರಿಂದ 25 ಪೈಸೆ ವಸೂಲ್ಮಾಡಲು ಮೀನಾಕ್ಷಿ ದೇವಸ್ಥಾನದ ಧರ್ಮದರ್ಶಿಗಳು ನಿರ್ಧರಿಸಿರುವರು.

ಹಿಂದೂಗಳ ಆಚಾರ

ಸಂಗ್ರಾಹಕರು— ಶಾಸ್ತ್ರಧರ್ಮನಿರತ " ಆನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಸಂಧ್ಯಾಕಾಲಗಳಲ್ಲಿ ಪರಮಾತ್ಮನ ಉಪಾಸನೆ ಮಾಡಬೇಕು

ಸೂರ್ಯನು ಉದಯಿಸುವಾಗಲೂ, ನಡುನೆತ್ತಿಯ ಮೇಲಿರುವಾಗಲೂ, ಅಸ್ತಮಿಸುವ ಕಾಲದಲ್ಲಿಯೂ ಸಂಧ್ಯಾ ಕಾಲವೆಂಬ ಸಂಜ್ಞೆ ಇರುತ್ತೆ. ಈ ಸಂಧ್ಯೆಯು ಋಕ್, ಯಜು, ಸಾಮವೇದಗಳ ರೂಪಾಂತರವೆಂದು ಹೇಳಲ್ಪಟ್ಟಿದೆ. ಆದಕಾರಣ ಈ ಕಾಲಗಳಲ್ಲಿ ಪ್ರತಿಯೊಬ್ಬರೂ ಪರಮಾತ್ಮನ ಉಪಾಸನೆ ಮಾಡಬೇಕು.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ದ್ವಿಜರು ತಾವು ಆಚಾರ್ಯ ಮುಖೇನ ಉಪದೇಶ ಹೊಂದಿದ ರೀತಿಯಲ್ಲಿ ಸಂಧ್ಯಾವಂದನವನ್ನು ಮಾಡಬೇಕು. ಇತರರು

ಶ್ಲೋ ॥ ಆದಿದೇವನನಮಸ್ತುಭ್ಯಂ ಪ್ರಸೀದಮನುಭಾಸ್ಕರ ।
ದಿವಾಕರನನಮಸ್ತುಭ್ಯಂ ಪ್ರಭಾಕರ ನಮೋಽಸ್ತುತೇ ॥
ತ್ರೈಗುಣ್ಯಂಚಮಹಾಶೂರಂ ಬ್ರಹ್ಮವಿಷ್ಣುಮಹೇಶ್ವರಮ್ ।
ಮಹಾಪಾಪಹರಂದೇವಂ ತಂಸೂರ್ಯಂ ಪ್ರಣಮಾಮ್ಯಹಮ್ ॥
ತಂಸೂರ್ಯಂ ಜಗತಾಂನಾಥಂ ಜ್ಞಾನವಿಜ್ಞಾನಮೋಕ್ಷದಂ ।
ಮಹಾಪಾಪಹರಂದೇವಂ ತಂಸೂರ್ಯಂ ಪ್ರಣಮಾಮ್ಯಹಮ್ ।

ಎಂದು ಹೇಳಿ ಸೂರ್ಯನಿಗೆ ಅಭಿಮುಖವಾಗಿ ನಮಸ್ಕರಿಸಿ, ನಂತರ ತಾವು ಉಪದೇಶ ಹೊಂದಿರುವ ಇತರ ಸ್ತೋತ್ರ ಜಪಾದಿಗಳನ್ನು ನಡೆಸಬೇಕು.

SHAKTI

SUDHA

A Superb Tonic



Protect the Cow

ಗೋರಕ್ಷಣೆ ಮತ್ತು ಪಾಲನೆದಯಾ ಕಾರ್ಯಗಳು ಹೆಚ್ಚಿ ಬೆಳಗಿ ನಡೆಯಲಿ

ವುಡ್‌ಲಾಂಡ್ಸ್ ಜನಭೂತ 3 ನೇ ವಾರ
ವೈಭವ ಆರಂಭ
— ಮನಮೋಹಕ ಹಿಂದಿ ಚಿತ್ರ —
ನೀಲ್ ಕಮಲ್ ★ Neel Kamal
ಈಸ್ಟ್‌ಮನ್ ಕಲರ್
.... ಮಿಲಿಯಗಟ್ಟಲೆ ರೂಪಾಯಿನ ಆತ್ಯಾಕರ್ಷಣೀಯ ಹಿಂದಿ ಚಿತ್ರ ....
ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮುಹಮೂದ್

ಆಪೆರ— ಜನಪ್ರಿಯ 4 ನೇ ವಾರ
ಚಿತ್ತಾಕರ್ಷ ಹಿಂದಿ ಚಿತ್ರ
ಬ್ರಹ್ಮಚಾರಿ
ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮುಹಮೂದ್

Printing — Neat Binding
Lakshminarasimha Press
Sivarampet, Mysore

ಆಶೋಕ ಏಜೆನ್ಸೀಸ್
ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುವವೆ

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basavjah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4